

ಕೆ.ವಿ. ರಾಜಲಕ್ಷ್ಮಿ

# ಸುರಿವ ಮಳೆಯು ನೀನು

"ಶತಾಬ್ದಿ ಟ್ರೈನ್ ಹೊರಟಾಯ್ತು 11ಕ್ಕೆ ಬೆಂಗಳೂರು. ಅಬ್ಬಬ್ಬಾ ಅಂದ್ರೂ ಹನ್ನೆರಡಕ್ಕೆ ಮನೇಲಿರ್ತೀನಿ, ಬೈ'' ವರ್ಷಳ ಮೆಸೇಜ್. ನಾನು ಉತ್ತರಿಸಲಿಲ್ಲ.

ನೀಲಿ ಗೀಟು ನಾನು ಮೆಸೇಜ್ ನೋಡಿರ್ತೀನಿ ಅಂತ ತಿಳಿಸುತ್ತಲ್ಲ? ಏಳಬೇಕೂ ಅನ್ನಿಸದೆ ಮಗ್ಗಲು ಬದಲಿಸಿದೆ. ದಿಢೀರನೆ ನರೋತ್ತಮನ ನೆನಪಾಯ್ತು. ಸಾಯುವ ವಯಸ್ಸಲ್ಲ; ಇನ್ನು ಅರವತ್ತೂ ತುಂಬಿಲ್ಲ. ಅರೆ, ಸಾಯಲು ವಯಸ್ಸೇನು? ಹುಟ್ಟುತ್ತಲೇ ಸಾಯೋಲ್ವೇ ಅಥವಾ ಸತ್ತೇ ಹುಟ್ಟೊಲ್ವೇ? ಆದರೂ, ಅವನ ಸಾವು ನನ್ನನ್ನು ಅಲ್ಲಾಡಿಸಿಬಿಟ್ಟಿದೆ. ದುರ್ವಿಧಿಯೆಂದರೆ ಅದನ್ನು ಹೊರಗೆ ಹಾಕುವ ಧೈರ್ಯವಿಲ್ಲ.

ಏಕೆಂದರೆ...

ಕರೆಗಂಟೆ ಧ್ವನಿಸಿದಾಗ ಬಲವಂತಕ್ಕೆ ಎದ್ದೆ. ಹಾಲಿನವ ಬಂದು ಹೋಗಿರ್ತಾನೆ, ಚಿಲಕಕ್ಕೆ ಸಿಗಿಸಿದ ಚೀಲದಲ್ಲಿ ಕುಳಿತಿದ್ದ ಅರ್ಧ ಲೀಟರ್‌ನ ಎರಡು ಪಾಕೀಟುಗಳನ್ನು ತೆಗೆದು ಫ್ರಿಡ್ಜ್‌ಗೆ ಹಾಕಿದೆ. ನೇರ ಬಚ್ಚಲಿಗೆ ನಡೆದು ಮುಖಮಾರ್ಜನ ಮಾಡಿ ಟವೆಲ್ಲಿನಲ್ಲಿ ಒರೆಸಿಕೊಳ್ಳುತ್ತ ಕನ್ನಡಿಯ ಮುಂದೆ ನಿಂತೆ. ದುಂಡಗಿನ ಕೆಂಪು ಬಿಂದಿ ಹಣೆಯಲ್ಲಿ ನಗುತಿತ್ತು. ನನಗೆ ಅಳು ಉಕ್ಕರಿಸಿಕೊಂಡು ಬಂದಿತು.

ದೇವರಿಗೆ ತಲೆಬಾಗಿ ಹಾಲು ಬಿಸಿಗಿಟ್ಟು, ಹೊಸ್ತಿಲು ಒರೆಸಿ ಸೀಮೆಸುಣ್ಣದಲ್ಲಿ ಎರಡೆರಡು ಗೆರೆ ಎಳೆದೆ. ಹಾಕದಿದ್ದರೆ ಅಶುಭ ಎಂಬುದು ತಲೆಯಲ್ಲಿ ಆಳವಾಗಿ ಕುಳಿತಿದೆಯಲ್ಲ?
ಯೋಚನೆಯಲ್ಲಿ ಹಾಲು ಇಟ್ಟದ್ದು ಒಂದು ಕ್ಷಣ ಮರೆಯಿತು. "ಬುಸ್" ಎಂಬ ಸದ್ದಿಗೆ ಅಡುಗೆಮನೆಗೆ ಓಡಿದೆ. ಹಾಲು ಇನ್ನೇನು ಪಾತ್ರೆಯಿಂದ ಹೊರಬರಬೇಕು, ತಕ್ಷಣ ಸ್ಟೌ ಆರಿಸಿದೆ. ಉಕ್ಕಿದ್ದ ಹಾಲು ತಣಿಯಿತು. ಅಬ್ಬಾ ಇಲ್ಲದಿದ್ದರೆ ಹಾಲು ವೇಸ್ಟ್ ಆಗಿ ಮತ್ತೆ ಹೊಸ ಪಾಕೀಟು ಒಡೆಯಬೇಕಿತ್ತು. ಹಾಲಿಗೆ ಸಕ್ಕರೆ, ಕಾಫಿ ಡಿಕಾಕ್ಷನ್ ಬೆರೆಸಿ ಓದುವ ಕೊಠಡಿಗೆ ಬಂದೆ. ಪೇಪರ್ ಬರಲು ಇನ್ನೂ ತಡವಾದೀತು. ದಿವಾನದಲ್ಲಿ ಕುಳಿತು ಕಿಟಕಿಯಾಚೆಯ ಪ್ರಕೃತಿಸೊಬಗನ್ನು ನೋಡುತ್ತಾ, ಕಾಫಿ ಹೀರುತ್ತಿದ್ದೆ. ಇದ್ದಕ್ಕಿದ್ದಂತೆ ಹನಿಯಲು ಶುರುವಾಗಿ ನೋಡನೋಡುತ್ತಿದ್ದಂತೆ ಜೋರಾಯಿತು.

★★★